**ಓ.ಎಸ್. ನಂ. 76/2019** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 23.2.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನನ್ನ ಆಧಾರ್ ಕಾರ್ಡನಲ್ಲಿ ನನ್ನ ಜನ್ಮ ದಿನಾಂಕ ಏನು ನಮುದಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ4 ರ ಕ್ರಯಪತ್ರದ ಜೊತೆ ನನ್ನ ಅಧಾರಕಾರ್ಡನ್ನು ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ಆದಾರ್ ಕಾರ್ಡ ನಲ್ಲಿ ಎನ್.ಕಾಳಿಯಣ್ಣನ್ ಎಂದು ಸಹಿ ಮಾಡಿರುತ್ತೆನೆ ಎಂದರೆ ಸರಿ. ಅದರಲ್ಲಿ ನನ್ನ ಜನ್ಮ ದಿನಾಂಕ 22.1.1973 ಎಂದು ನಮೂದಾಗಿರುತ್ತದೆ ಎಂದರೆ ಸರಿ. 1998 ರಲ್ಲಿ ನಿಡಿ4 ರ ಆಧಾರಕಾರ್ಡ ನಂತೆ ನನಗೆ ಸುಮಾರು 25 ವರ್ಷ ಆಗಿರುತ್ತದೆ ಎಂದರೆ ಸರಿ. ನಿಪಿ5 ರಲ್ಲಿ ವಯಸ್ಸಿನ ಕಾಲಂ ನಲ್ಲಿ 32 ವರ್ಷ ಎಂದು ನಮೂದಾಗಿದೆ ಎಂದರೆ ಸರಿ. ವಾದಪತ್ರದಲ್ಲಿ ನನ್ನ ವಯಸ್ಸು 47 ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನಿಡಿ4 ರ ಆಧಾರಕಾರ್ಡನಲ್ಲಿ ನನ್ನ ಹೆಸರು ಎನ್.ಕಾಳಿಯಣ್ಣನ್ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ. ನಿಡಿ3 ರಲ್ಲಿರುವ ನನ್ನ ಚುನಾವಣಾ ಗುರುತಿನ ಚೀಟಿಯಲ್ಲಿ ಎನ್.ಕಾಳಿಯಣ್ಣನ್ ಎಂದು ಮಾತ್ರ ನಮೂದಾಗಿರುತ್ತದೆ ಮತ್ತು ಕಾಳಿಯಣ್ಣನ್ ಎಂದು ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ1 ರಿಂದ ನಿಪಿ5 ದಾಖಲೆಗಳಲ್ಲಿ ಮುತ್ತುಸ್ವಾ ಮಿ ಎಂದು ಮಾತ್ರ ನಮೂದಗಿರುತ್ತದೆ ಎಂದರೆ ಸರಿ. ತಮಿಳುನಾಡಿನ ನನ್ನ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ಕಾಳಿಯಣ್ಣನ್ ಎಂದು ಮಾತ್ರ ನಮೂದಾಗಿದೆ ಎಂದರೆ ಸರಿ. ನನ್ನ ಹೆಸರು ತಮಿಳುನಾಡಿನ ದಾಖಲೆಗಳಲ್ಲಿ ಕಾಳಿಯಣ್ಣನ್ ಎಂದು ನಮೂದಗಿರುತ್ತದೆ, ಆದರೆ ದಾವಾಸ್ವತ್ತಿನ ದಾಖಲೆಯಲ್ಲಿ ಮುತ್ತುಸ್ವಾಮಿ ಎಂದು ನಮೂದಾಗಿದೆ ಎಂದು ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಎಂದಿಗೂ ಮುತ್ತುಸ್ವಾ ಮಿ ಆಗಿರುವುದಿಲ್ಲ, ನಾನು ಕಾಳಿಯಣ್ಣನ್ ಮಾತ್ರ ಅಗಿರುತ್ತೇನೆ ಎಂದರೆ ಸಾಕ್ಷಿ ಸದರಿ ಪ್ರಶ್ನೆಗೆ ಉತ್ತರ ನೀಡದೆ ಕೆಲವು ದಾಖಲೆಗಳಲ್ಲಿ ನನ್ನ ಹೆಸರು ಮುತ್ತುಸ್ವಾಮಿ ಎಂದು ನಮೂದಾಗಿರುತ್ತದೆ ಎನ್ನುವರು. ನಾನು ತಹಶೀಲ್ದಾರ್ ಕಛೇರಿಯ ಮಂಜೂರಾತಿ ದಾಖಲೆಗಳಲ್ಲಿ ಮುತ್ತುಸ್ವಾಮಿ ಎಂದು ಕನ್ನಡದಲ್ಲಿ ಸಹಿ ಮಾಡಿರುತ್ತೇನೆ. ನನಗೆ ಕನ್ನಡದಲ್ಲಿ ಸಹಿ ಮಾಡಲು ಬರುವುದಿಲ್ಲ ಮತ್ತು ನಾನು ಆಂಗ್ಲ ಭಾಷೆಯಲ್ಲಿ ಕಾಳಿಯಣ್ಣನ್ ಎಂದು ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಯನಗೌಂಡರ್ ರವರ ಮಗನಾದ ಮುತ್ತುಸ್ವಾ ಮಿಗೆ ದಾವಾಸ್ವತ್ತು ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ನಾನೇ ನಯನಗೌಂಡರ್ ರವರ ಮಗನಾದ ಮುತ್ತುಸ್ವಾಮಿ ಎನ್ನುವರು. ಮಂಜೂರಾದ ಮುತ್ತುಸ್ವಾಮಿ ರವರ ತಂದೆ ಹೆಸರು ನಯನಗೌಂಡರ್ ಮತ್ತು ನನ್ನ ತಂದೆ ಹೆಸರು ನಯನಗೌಂಡರ್ ಆಗಿರುವ ಕಾರಣ ಅಂದರೆ ಒಂದೇ ಹೆಸರು ಇರುವ ಕಾರಣ ದಾವಾಸ್ವತ್ತು ಕಬಳಿಸುವ ದುರುದ್ದೇಶದಿಂದ ನಾನು ಕಾಳಿಯಣ್ಣನ್ ಆಗಿದ್ದರೂ ಸಹ ಮುತ್ತುಸ್ವಾಮಿ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.